ಕೊಳ್ಳಬೇಕೆಂದು ಎಲ್ಲಿ ಇದೆ? ಇಷ್ಟು ಕಿ.ಮೀ. ತೆಗೆದುಕೊಳ್ಳಬೇಕೆಂದು ಎಲ್ಲಿ ಇದೆ? ಮೈನರ್ ಇರಿಗೇಷನ್‌ನಲ್ಲಿ above 500 ಎಕರೆ ಅಚ್ಚುಕಟ್ಟು ಇರತಕ್ಕದ್ದು ಪಿ.ಡಬ್ಲ್ಯೂ.ಡಿ.ಗೆ ಹಾಗೂ below 500 ಎಕರೆ ಎಲ್ಲಾ ಜಿಲ್ಲಾಪರಿಷತ್ ನವರಿಗೆ ಕೊಟ್ಟಿದ್ದಾರೆ. ಆದರೆ ಒಂದೂ ರಸ್ತೆ ರಿಪೇರಿ ಆಗಿಲ್ಲ. ೧೦೦ ಎಕರೆ ಅಚ್ಚುಕಟ್ಟು ಇರುವುದಕ್ಕೆ ಮಾತ್ರ ಅವರಿಗೆ ಕೊಡಬೇಕು. ಬಾಕಿಯನ್ನು ನೀವು ವಹಿಸಿಕೊಳ್ಳಬೇಕೆಂದು ಆರ್ಡರ್ ಇಷ್ಯೂ ಮಾಡಿದರೆ ಯಾವ ಅಡ್ಡಿಯೂ ಬರುವುದಿಲ್ಲ. ಅದನ್ನು ತಾವು ಪುನರ್ ಪರಿಶೀಲಿಸಬೇಕು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಆಕ್ಟನ್ನು ತಿದ್ದುಪಡಿ ಮಾಡಬೇಕೆಂದು ನಾನು ಹೇಳಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ತುಗಳಿಗೆ ಅಧಿಕಾರಗಳನ್ನು ವಹಿಸಿಕೊಟ್ಟು ಆದನ್ನು ಪುನಃ ವಾಪಸ್ಸು ತೆಗೆದುಕೊಳ್ಳಬೇಕಾದರೆ ಒಂದು ನಾರ್ಮಲ್ ಕೋರ್ಸ್ ಕನ್ವಲ್ಟ್ ಮಾಡತಕ್ಕ ಸೌಜನ್ಯವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈಗಾಗಲೇ ವಹಿಸಿಕೊಳ್ಳುವುದಕ್ಕೆ ಅವರ ಸಮ್ಮತಿಯನ್ನು ಕೇಳಿದ್ದೀವೆ ಬಹುತೇಕ ಜಿಲ್ಲಾ ಪರಿಷತ್ತಿನವರು ಒಪ್ಪಿದ್ದಾರೆ. ಆದರೆ ಇನ್ನೂ ಕೆಲವರು ನಾವೇ ಮಾಡುತ್ತೀವೆ ನಿಮಗೆ ವಾಪಸ್ಸು ಕೊಡುವುದಿಲ್ಲ ಎಂದು ರಿಸಿಸ್ಟೆಂಟ್ ಮಾಡಿದ್ದಾರೆ. ಇದಕ್ಕೆ ಬೇಕಾದ ಹಣವನ್ನು ಒದಗಿಸಬೇಕೆಂದು ಕೇಳುತ್ತಿದ್ದಾರೆ. ಇದನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಂಡು ಆದನ್ನು ಮಾಡತಕ್ಕದ್ದು ಸಾಧ್ಯ ಆನ್ನಿಸಿದರೂ ಈ ಸಣ್ಣ ವ್ಯತ್ಯಾಸದಿಂದಲೇ ಆಗಿದೆ. ಈಗ ನಮಗೂ ಕೂಡ ಹಣದ ಕೊರತೆ ಇದೆ. ಈ ಒಂದು ಪ್ರಶ್ನೆ ಪರಿಶೀಲನೆಗೆ ಯೋಗ್ಯವಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕನ್ನಡ ಚಿತ್ರರಂಗದ ಬೆಳವಣಿಗೆ

೧೮೪. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಕಾನೂನು ಮತ್ತು ಸಂ ದೀಯ ವ್ಯವಹಾರಗಳು, ಯೋಜನಾ ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡ ಚಿತ್ರರಂಗದ ಬೆಳವಣಿಗೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಆ) ಕರ್ನಾಟಕದ ಸಂಸ್ಕೃತಿ, ಸಾಹಿತ್ಯ ಉತ್ತಮ ಸಂಭಾಷಣೆ ಇರುವ ಕನ್ನಡ ಚಿತ್ರಗಳಿಗೆ ಮಾತ್ರ ಸಹಾಯಧನ ಪ್ರೋತ್ಸಾಹ ನೀಡುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ?

ಇ) ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನವಿಲ್ಲದಿರುವಾಗ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳನ್ನು ರದ್ದುಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎ. ವೀರಪ್ಪ ಮೊಯಿಲಿ, (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನ ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು) —

ಅ) ಕರ್ನಾಟಕದಲ್ಲಿಯೇ ತಯಾರಾದ ಕನ್ನಡ ಚಲನ ಚಿತ್ರಗಳಿಗೆ ಸಹಾಯಧನ ನೀಡುವುದು ಚಿತ್ರೀಕರಣ ಶುಲ್ಕ ರಿಯಾಯಿತಿ, ಶೇಕಡಾ ೫೦ರ ಮನರಂಜನಾ ತೆರಿಗೆ ವಿನಾಯಿತಿ, ಚಲನಚಿತ್ರಗಳಿಗೆ ರಾಜ್ಯ ಪ್ರಶಸ್ತಿ ನೀಡುವುದು, ಪ್ರಶಸ್ತಿ ವಿಜೇತ ಚಿತ್ರಗಳಿಗೆ ಶೇಕಡಾ ೧೦೦ ರಷ್ಟು ಮನರಂಜನಾ ತೆರಿಗೆ ನೀಡುವ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

ಆ) ಇಲ್ಲ. ಆದರೆ ಕಲಾತ್ಮಕ ಚಿತ್ರಗಳಿಗೆ ಇತರ ಚಿತ್ರಗಳಿಗಿಂತ ೫೦,೦೦೦.೦೦ ರೂಪಾಯಿಗಳ ಹೆಚ್ಚಿನ ಸಹಾಯಧನ ನೀಡಲಾಗುತ್ತಿದೆ.?

ಇ) ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಗಳನ್ನು ರದ್ದು ಪಡಿಸಿಲ್ಲ. ಅಲ್ಲಿ ಕನ್ನಡ ಚಿತ್ರಗಳು ಹೆಚ್ಚಾಗಿ ಪ್ರದರ್ಶನಗೊಳ್ಳುತ್ತಿಲ್ಲವೆಂಬ ಕಾರಣಕ್ಕಾಗಿ ರಾಜ್ಯದಲ್ಲಿ ಪರಭಾಷಾ ಚಿತ್ರಗಳ ಪ್ರದರ್ಶನವನ್ನು ರದ್ದುಪಡಿಸಲು ಸಾಧ್ಯವಾಗದು.

ಶ್ರೀ ವಾಟಾಳ್ ನಾಗರಾಜ್.— ಕನ್ನಡ ಚಿತ್ರಗಳ ಬೆಳವಣಿಗೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮ ಏನೆಂದರೆ ಕೇವಲ ಶೇಕಡ ೫೦ರಷ್ಟು ತೆರಿಗೆ ವಿನಾಯಿತಿ, ರಾಜ್ಯ ಪ್ರಶಸ್ತಿ ನೀಡಿರುವುದು ಹಾಗೂ ಆ ಚಿತ್ರಗಳಿಗೆ ೧೦೦ರಷ್ಟು ಮನರಂಜನೆ ತೆರಿಗೆ ವಿನಾಯಿತಿ ನೀಡುವುದು ಈ ಮೂರೇ ಈ ಸರ್ಕಾರದ ಕಾರ್ಯಕ್ರಮಗಳು ಈ ಕನ್ನಡ ಚಲನ ಚಿತ್ರಗಳ ಬೆಳವಣಿಗೆಗಾಗಿ ಸಮಗ್ರವಾದ ಯೋಜನೆ ಇಟ್ಟುಕೊಂಡಿದ್ದೀರಾ ಅಥವಾ ದೊಡ್ಡದಾಗಿ ಚಿತ್ರನಗರಿ ಮಾಡತಕ್ಕ ಯೋಜನೆಯಾಗಲೀ ತಮ್ಮಲ್ಲಿ ಏನಾದರೂ ಇದೆಯೇ? ಸರ್ಕಾರವೇ ಒಂದು ಸ್ಟುಡಿಯೋ ಮಾಡಿ ಕನ್ನಡ ಚಿತ್ರರಂಗಗಳಿಗೆ ಆದ್ಯತೆಯನ್ನು

ಕೊಡುವ ವಿಚಾರ ತಮ್ಮ ಗಮನದಲ್ಲಿ ಇದೆಯೇ? ಮತ್ತು ಕನ್ನಡ ಚಿತ್ರವನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುವ ಬಗ್ಗೆ ಕಾನೂನು ತರುವ ಬಗ್ಗೆ ತಮ್ಮ ಗಮನದಲ್ಲಿ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಸದಸ್ಯರು ಹೇಳಿದಂತೆ ಹಾಗೂ ನಾನು ಹೇಳಿದಂತೆ ಪ್ರೋತ್ಸಾಹದ ಜೊತೆಯಲ್ಲಿ ಚಿತ್ರೀಕರಣ ಶುಲ್ಕದಲ್ಲಿ ಕೂಡ ನಾವು ಕನ್ನಡ ಚಿತ್ರಗಳಿಗೆ ಹೆಚ್ಚು ರಿಯಾಯಿತಿ ಮಾಡುತ್ತಿದ್ದೇವೆ. ಅಷ್ಟು ಮಾತ್ರ ಅಲ್ಲದೆ ಪ್ರದರ್ಶನ ತೆರಿಗೆಯನ್ನು ಕನ್ನಡ ಚಿತ್ರಗಳಿಗೆ ಕಡಿಮೆ ಮಾಡಿದ್ದೇವೆ. ಇನ್ನು ಕಡ್ಡಾಯ ಪ್ರದರ್ಶನದ ವಿಚಾರದಲ್ಲಿ ಒಮ್ಮೆ ಆಡಳಿತ ಆದೇಶದ ಮುಖೇನ ೫ ವಾರಗಳ ಕಾಲ ಕನ್ನಡ ಚಿತ್ರವನ್ನು ಚಿತ್ರ ಮಂದಿರದಲ್ಲಿ ಕಡ್ಡಾಯ ಪ್ರದರ್ಶನ ಮಾಡಬೇಕೆಂದು ಇತ್ತು. ಆದರೆ ಸರ್ವೋಚ್ಚ ನ್ಯಾಯಾಲಯದಲ್ಲಿ ಇದನ್ನು ರದ್ದು ಮಾಡಿದ್ದಾರೆ ಈಗ ಬೇರೆ ಯಾವ ರಾಜ್ಯಗಳಲ್ಲಿ ಪರಭಾಷೆ ಚಿತ್ರಗಳನ್ನು ಕಡಿಮೆ ಮಾಡತಕ್ಕ ಅಥವಾ ಅವರವರ ಪ್ರದೇಶದ ಭಾಷೆಗಳ ಚಿತ್ರಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಲಿಕ್ಕೆ ಯಾವ ರೀತಿಯ ನಿಷೇಧವಾದ ಕಾನೂನೂ ಸಹ ಇಲ್ಲ. ಅಥವಾ ಯಾವುದೇ ರೀತಿಯ ಕಾರ್ಯಕ್ರಮವೂ ಇಲ್ಲ. ಆದರೆ ಇಲ್ಲಿ ಕನ್ನಡ ಚಿತ್ರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕಾದ ಅವಶ್ಯಕತೆ ಇದೆ. ಈ ಒಂದು ಸಿದ್ಧಾಂತಕ್ಕೆ ನಮ್ಮ ಸರ್ಕಾರ ಕೂಡ ಒಪ್ಪುತ್ತದೆ ನಾವು ಕೊಟ್ಟಂಥ ಎಕ್ಸಿಕ್ಯುಟೀವ್ ಆರ್ಡರನ್ನು ಸರ್ವೋಚ್ಚ ನ್ಯಾಯಾಲಯ ರದ್ದು ಮಾಡಿದ್ದಾರೆ. ನಾವು ಕಾನೂನಿನ ಪ್ರಕಾರ, ಇಂತಿಷ್ಟು ವಾರ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬ ವಿಚಾರವನ್ನು ಸರ್ಕಾರ ಗಮನಿಸುತ್ತದೆ. ಅದು ಸಾಧ್ಯವಿದ್ದರೆ ನಾವು ಕಾನೂನನ್ನು ತರಲು ಸಿದ್ದರಿದ್ದೇವೆ.

೧೧–೩೦ ಪಿ.ಎಂ.

ಶ್ರೀ ವಾಟಾಳ್ ನಾಗರಾಜ್.— ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡಬೇಕೆಂಬ ಬಗ್ಗೆ ಕಾನೂನು ತರಬೇಕೆಂಬ ಬಗ್ಗೆ ಪ್ರಗತಿಶೀಲನೆಯಲ್ಲಿದೆ ಎಂದು ತಾವು ಹೇಳಿದ್ದೀರಿ. ಕೇವಲ ಕನ್ನಡ ಚಿತ್ರರಂಗ ಬೆಳವಣಿಗೆಗಾಗಿ ಹೊಸ ಯೋಜನೆಗಳನ್ನೇನಾದರೂ ತಮ್ಮ ಸರಕಾರ ಮಾಡುತ್ತದೆಯೇ? ಚಿತ್ರ ನಗರಿ ನಿರ್ಮಾಣ, ಸರಕಾರವೇ ಸ್ಟುಡಿಯೋವನ್ನು ನಿರ್ಮಾಣ ಮಾಡಿ ಆ ಮೂಲಕ ಕನ್ನಡ ಚಿತ್ರಗಳಿಗೆ ಅನುಕೂಲ ಮಾಡಿಕೊಡಬೇಕಾ. ಕಡಿಮೆ ದರದಲ್ಲಿ ಕನ್ನಡ ಚಿತ್ರಗಳನ್ನು ತಯಾರು ಮಾಡುವುದಕ್ಕೆ ನಿರ್ಮಾಪಕರಿಗೆ ಅವಕಾಶ ಮಾಡಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಒಂದು ಕಾಲದಲ್ಲಿ ಕನ್ನಡ ಚಿತ್ರಗಳು ಪ್ರಪಂಚದಲ್ಲಿ ಅತ್ಯಂತ ಉನ್ನತ ಮಟ್ಟಕ್ಕೆ ಬಂದು ಅನೇಕ ಬಹುಮಾನಗಳನ್ನು ಪಡೆದು ಕೊಂಡಿದ್ದವು. ಕನ್ನಡಕ್ಕೆ ಉತ್ತಮವಾದ ಸ್ಥಾನವನ್ನು ಶಕ್ತಿಯನ್ನು ತಂದು ಕೊಟ್ಟಂಥ ಒಂದು ಕಾಲ ಹಿಂದೆ ಇತ್ತು. ಅದು ಮತ್ತೆ ಮರುಕಳಿಸಬೇಕಾದರೆ ಸರಕಾರ ಹಾಕಿಕೊಂಡಿರತಕ್ಕಂತಹ ಕಾರ್ಯಕ್ರಮಗಳೇನು? ಇದು ಅತ್ಯಂತ ಪ್ರಮುಖವಾದಂಥ ವಿಚಾರ.

ಶ್ರೀ ಎಂ ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿತ್ತದೆ. ಬೇರೆ ಬೇರೆ ವರ್ಷದಲ್ಲಿ ಬೇರೆ ಬೇರೆ ರೀತಿಯ ಪ್ರೋತ್ಸಾಹ, ರಿಯಾಯಿತಿಗಳನ್ನು ಕೊಟ್ಟಿದ್ದರೂ ಕೂಡ ಪ್ರೊಡ್ಯೂಸರ್ಸ್‌ಗಳು ತೆರಿಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಉದ್ಯಮವನ್ನು ಅಭಿವೃದ್ಧಿ ಮಾಡಲಿಕ್ಕೆ ಸಾಕಾಗಷ್ಟು ಹಣವನ್ನು ಒದಗಿಸಿಲ್ಲ ಇದೊಂದು ದುರದೃಷ್ಟಕರವಾದಂತಹ ಬೆಳವಣಿಗೆ ಎಂದು ಹೇಳುತ್ತಾರೆ. ೩೫ ಎಂ. ಎಂ. ಪಿಕ್ಚರ್‌ಗಳು ಏನು ಇವೆ ಅವುಗಳನ್ನು ತೆಗೆಯುವುದಕ್ಕೆ ಬೇಕಾದ ಸಾಮಗ್ರಿಗಳೆಲ್ಲಾ ನಮ್ಮಲ್ಲಿದೆ ಆದರೆ ೧೬ ಎಂ.ಎಂ.ಗೆ ಬೇಕಾದಂತಹ ಸಾಮಗ್ರಿಗಳು ನಮ್ಮಲ್ಲಿ ಇಲ್ಲ. ಇನ್ನು ೫ ವರ್ಷದಲ್ಲಿ ೧೬ ಎಂ.ಎಂ ಚಿತ್ರವನ್ನು ಕರ್ನಾಟಕದಲ್ಲಿ ತಯಾರು ಮಾಡಲಿಕ್ಕೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ದೊರಕಿಸಿಕೊಡಬೇಕೆಂಬ ಬಗ್ಗೆ ಸರಕಾರ ಒಂದು ನಿರ್ದಿಷ್ಟವಾದಂತಹ ಯೋಜನೆಯನ್ನು ಇಟ್ಟುಕೊಂಡಿದೆ. ಸಾಹಿತ್ಯ ಮತ್ತು ಸಾಂಸ್ಕೃತಿಕವಾದಂತಹ ಚಿತ್ರಗಳನ್ನು ತಯಾರು ಮಾಡಲಿಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದೀರಿ, ಕಲಾತ್ಮಕ ಚಿತ್ರಗಳೆಂದು ಹೇಳಿದ್ದೀರಿ ಇದು ಕಲಾತ್ಮಕ ಚಿತ್ರವೆಂದು ಹೇಳುವವರು ತೀರ್ಪುಗಾರರು. ಚಿತ್ರ ಯಾವ ರೀತಿಯಾಗಿ ಕಲಾತ್ಮಕವಾಗಿ ಇರಬೇಕು ಯಾವ ರೀತಿಯಾಗಿ ಅದರ ಔಚಿತ್ಯವನ್ನು ಕಾಪಾಡಿಕೊಂಡು ಬರಬೇಕೆಂಬ ಬಗ್ಗೆ ಒಂದು ಮಾರ್ಗದರ್ಶನ ಇದೆ. ಸಾಹಿತ್ಯ, ಸಾಂಸ್ಕೃತಿಕವಾಗಿ ಮೇಲ್ಮಟ್ಟದಲ್ಲಿರತಕ್ಕಂತಹ ಚಿತ್ರಗಳಿಂದ ಮತ್ತು ಕಲಾತ್ಮಕವಾಗಿ ಇರುವಂತಹ ಚಿತ್ರಗಳಿಗೆ ಕೂಡ ಸರಕಾರ ಯಾವ ರೀತಿಯಲ್ಲಿ ೫೦,೦೦೦ ರೂಪಾಯಿಗಳ ಹೆಚ್ಚಿನ ಹಣವನ್ನು ಕೊಡುತ್ತಿದ್ದೇವೆ. ಈ ವ್ಯಾಪ್ತಿಯನ್ನು ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿ ಮೇಲ್ಮಟ್ಟದಲ್ಲಿರತಕ್ಕಂತಹ ಚಿತ್ರಗಳಿಗೂ ಕೂಡ ವಿಸ್ತರಿಸತಕ್ಕಂತಹ ಆಲೋಚನೆಯನ್ನು ಖಂಡಿತವಾಗಿ ಸರಕಾರ ಮಾಡುತ್ತದೆ. ಆ ರೀತಿಯ ಮಾರ್ಗದರ್ಶನವನ್ನು ಖಂಡಿತವಾಗಿ ನಿರೂಪಿಸುತ್ತೇವೆ. ಇನ್ನು ಚಿತ್ರನಗರಿ ನಿರ್ಮಾಣಕ್ಕೋಸ್ಕರ ನಮಗೆ ಈಗಾಗಲೇ ಜಾಗ

ಸಿಕ್ಕಿದೆ ಅದು ಸಿಕ್ಕು ೭-೮ ವರ್ಷಗಳಾಯಿತು. ಆದರೆ ಹೇಳಿಕೊಳ್ಳತಕ್ಕಂಥ ಅಭಿವೃದ್ಧಿ ಏನೂ ಆಗಿಲ್ಲ. ಆದನ್ನು ಹಾಗೆ ಬಿಡಬಾರದು ಚಿತ್ರ ನಗರಿಗೆ ಬೇಕಾದಂತಹ ಎಲ್ಲಾ ಸವಲತ್ತುಗಳನ್ನು ಒದಗಿಸಿ ಕೊಟ್ಟು ಕನ್ನಡ ಚಿತ್ರ ಜಗತ್ತು ಹೆಚ್ಚು ವಿಸ್ತಾರವಾಗಿ ಬೆಳೆಯುವ ರೀತಿಯಲ್ಲಿ ಮಾಡಲು ಬರತಕ್ಕಂತಹ ಹಣಕಾಸು ವರ್ಷದಲ್ಲಿ ಚಿತ್ರ-ನಗರಿ ನಿರ್ಮಾಣಕ್ಕೆ ಸರಿಯಾದಂತಹ ಸ್ವರೂಪ ಬರುವಂತಹ ರೀತಿಯಲ್ಲಿ ಅಭಿವೃದ್ಧಿ ಕಾಣುವಂತಹ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ.— ಕನ್ನಡ ಚಿತ್ರಗಳನ್ನು ಕಡ್ಡಾಯ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇತ್ತೀಚೆಗೆ ನಮ್ಮ ಕೋಲಾರ ಜಿಲ್ಲೆಯ ಚಲನಚಿತ್ರ ಮಂದಿರದ ಮಾಲೀಕರು ನನ್ನ ಹತ್ತಿರ ಬಂದು ನಾವು ಕನ್ನಡ ಚಿತ್ರಗಳನ್ನು ತರಿಸಿ ೭-೮ ವಾರಗಳನ್ನು ನಡೆಸಬೇಕೆಂದು ಸರಕಾರ ಹೇಳಿದರೆ ನಮಗೆ ಕಷ್ಟವಾಗುತ್ತದೆ ಲಾಸ್ ಆಗುತ್ತದೆ. ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ತೆಲುಗು ಹೆಚ್ಚಾಗಿ ಇದೆ. ಅಲ್ಲಿ ೩-೪ ದಿವಸ ಇಲ್ಲವೇ ಒಂದು ವಾರದ ಮೇಲೆ ಕನ್ನಡ ಚಿತ್ರ ನಡೆಯುವುದಿಲ್ಲ. ಅಂಥಾದ್ದರಲ್ಲಿ ಸರಕಾರ ೪-೫ ವಾರಗಳನ್ನು ನಡೆಸಬೇಕೆಂದು ಹೇಳಿದರೆ ಆ ಮಾಲೀಕನು ಲಾಸ್ ಆಗಿ ಚಿತ್ರವಂದಿರವನ್ನು ಮುಚ್ಚುತಕ್ಕಂತಹ ಪರಿಸ್ಥಿತಿ ಬಂದಿದೆ. ಇದನ್ನು ಕಡ್ಡಾಯವಾಗಿ ಮಾಡುವಾಗ ಎಲ್ಲೆಲ್ಲಿ ತೆಲುಗು, ಬೇರೆ ಭಾಷೆಗಳು ಹೆಚ್ಚಾಗಿ ಬಳಕೆಯಲ್ಲಿರುತ್ತವೆ ಅಂತಹ ಕಡೆಗಳಿಗೆ ವಿನಾಯ್ತಿ ಕೊಡುತ್ತೀರಾ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾವು ಅವರಿಗೆ ಪ್ರೋತ್ಸಾಹ ಕೊಡುವುದು ಕನ್ನಡ ಚಿತ್ರ ಬೆಳೆಯಲಿ ಎಂದು. ಕನ್ನಡ ಚಿತ್ರವನ್ನು ಅವರೂ ಕೂಡ ನೋಡಲಿ ಎಂದು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ,

ಕೆಲವು ಕಡೆಗಳಲ್ಲಿ ಅಭಿರುಚಿ ಕನ್ನಡದ ಬಗ್ಗೆ ಬೆಳೆದಿಲ್ಲ. ಅಲ್ಲಿ ತೆಲುಗು ಚಿತ್ರಗಳನ್ನೇ ತೋರಿಸುತ್ತಿರುವುದರಿಂದ ತೆಲುಗಿನ ಅಭಿರುಚಿ ಹಿಡಿದಿದೆ. ಆದೇ ರೀತಿ ತಮಿಳು ಚಿತ್ರಗಳನ್ನೇ ತೋರಿಸುವ ಕಡೆಗಳಲ್ಲಿ ತಮಿಳಿನ ಅಭಿರುಚಿಯೇ ಹಿಡಿದಿದೆ. ಮೊದಲಿನಿಂದಲೂ ಕನ್ನಡ ಚಿತ್ರಗಳನ್ನೇ ಹಾಕಿದ್ದರೆ ಕನ್ನಡದ ಅಭಿರುಚಿ ಬರುತ್ತಿತ್ತು. ನಾನು ಇಷ್ಟು ಮಾತ್ರ ಹೇಳುತ್ತೇನೆ, ತೆಲುಗಿನಲ್ಲಿ ಎಷ್ಟು ಸಂಪನ್ನತೆ ಇದೆಯೋ ಅದಕ್ಕಿಂತ ಹೆಚ್ಚಿನ ಸಂಪನ್ನತೆ ಈ ಕನ್ನಡ ಚಿತ್ರಗಳಲ್ಲಿದೆ. ತೆಲುಗು, ತಮಿಳು ಚಿತ್ರಗಳಿಗಿಂತಲೂ ಸುಂದರವಾದ, ಮನರಂಜನೀಯವಾದ ಚಿತ್ರಗಳನ್ನು ತಯಾರಿಸುವ ಶಕ್ತಿ ನಮ್ಮ ಕನ್ನಡಿಗರಲ್ಲಿದೆ. ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನದ ವಿಚಾರವನ್ನು ನಾವು ಆಲೋಚನೆ ಮಾಡುತ್ತಿದ್ದೇವೆ.

ಮೂಲೂರಿನಲ್ಲಿ ಕ್ರೀಡಾಂಗಣ ನಿರ್ಮಾಣ

೧೫೧. ಶ್ರೀ ಎ. ನಾಗರಾಜ (ಮೂಲೂರು). — ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದ ಮುಂದೆ ಮೂಲೂರಿನಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ ಪ್ರಸ್ತಾವನೆ ಇದೆಯೆ ?

ಆ) ಇದ್ದಲ್ಲಿ ೧೯೯೦ನೇ ಹಣಕಾಸಿನ ವರ್ಷದ ಆಯವ್ಯಯದಲ್ಲಿ ಸೇರಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮಂತ್ರಿಗಳು).—

೧) ಇಲ್ಲ.

೨) ಉದ್ಭವಿಸುವುದಿಲ್ಲ.

ಶ್ರೀ ಎ. ನಾಗರಾಜು.—ಸ್ವಾಮಿ ನನ್ನ ಎರಡನೆಯ ಪ್ರಶ್ನೆಗೆ 'ಉದ್ಭವಿಸುವುದಿಲ್ಲ' ಎಂದು ಉತ್ತರ ನೀಡಿದ್ದಾರೆ. ಆದರೆ ಮೂಲೂರು ಟೌನ್ ನಮ್ಮ ಬೆಂಗಳೂರಿಗೆ ೪೫ ಕಿಲೋಮೀಟರ್ ದೂರದಲ್ಲಿದೆ. ಮುಂದಿನ ತಿಂಗಳು ಅಲ್ಲಿ ದಕ್ಷಿಣ ಭಾರತದ ಮಟ್ಟದಲ್ಲಿ ಫುಟ್‌ಬಾಲ್ ಪಂದ್ಯ ನಡೆಯುತ್ತದೆ. ಮಾನ್ಯ ಮಂಂತ್ರಿಗಳು ಇದಕ್ಕೆ ಧನಸಹಾಯ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಮುನಿಸಿಪಾಲಿಟಿಗಳೂ ಕೂಡ ಹಣ ಸಹಾಯ ಮಾಡಲು ಮುಂದೆ ಬಂದಿವೆ. ವಾಲಂಟರಿ ಆರ್ಗನೈಸೇಷನ್‌ಗಳಾದ ರೋಟರಿ ಕ್ಲಬ್, ಲಯನ್ಸ್ ಕ್ಲಬ್‌ಗಳೂ ಕೂಡ ಹಣ ಸಹಾಯ ಮಾಡಲು ಮುಂದೆ ಬಂದಿದೆ.